ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಕೇರಾಫ್ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹುಮಹಡಿಗಳ ಕಟ್ಟಡ, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001

**E-mail ID: icpssarakar@gmail.com** **Ph.No.080-22879382**

ಸಂಖ್ಯೆ: ಐಸಿಪಿಎಸ್/ಸಾರಾ–07/ಪ್ರಾಯೋಜಕತ್ವ/2020–21 ದಿನಾಂಕ:06.07.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ಪ್ರಾಯೋಜಕತ್ವ ಕಾರ್ಯಕ್ರಮದಡಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಮಮಇ 159 ಮಬಾಬ 2012, ದಿನಾಂಕ:13–03–2013.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಪ್ರತಿಯೊಂದು ಮಗುವು ಕುಟುಂಬದಲ್ಲಿ ಬೆಳೆಯುವುದು "ಮಗುವಿನ ಹಕ್ಕು" ಎಂಬ ಧ್ಯೇಯದೊಂದಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮಕ್ಕಳನ್ನು ಕುಟುಂಬ ವಾತಾವರಣದಲ್ಲಿ ಬೆಳೆಸಲು ಕೇಂದ್ರ ಪುರಸ್ಕೃತ ಪ್ರಾಯೋಜಿತ ಕಾರ್ಯವನ್ನು ಅನುಷ್ಠಾನಕ್ಕೆ ತಂದಿದೆ. ಈ ಕಾರ್ಯಕ್ರಮದ ಪ್ರಥಮ ಆದ್ಯತೆಯು ಮಕ್ಕಳ ಅಸಾಂಸ್ಥೀಕರಣಗೊಳಿಸುವಿಕೆ (De-institutionalization) ಹಾಗೂ ಕುಟುಂಬದೊಡನೆ ಮರು ಸೇರ್ಪಡೆಗೊಳಿಸುವುದಾಗಿರುತ್ತದೆ. ಕುಟುಂಬ ವಾತಾವರಣವನ್ನು ಉತ್ತಮಪಡಿಸುವ ಸಲುವಾಗಿ ಮಕ್ಕಳು ದುಡಿಮೆಗೆ ಹೋಗುವುದನ್ನು ತಪ್ಪಿಸಿ ಶಿಕ್ಷಣವನ್ನು ಮುಂದುವರಿಸುವುದನ್ನು ಉತ್ತೇಜಿಸಲು ಹಾಗೂ ವೈದ್ಯಕೀಯ, ಪೌಷ್ಟಿಕ ಆಹಾರ, ವೃತ್ತಿ ತರಬೇತಿ ಮತ್ತು ಇತರೆ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಗಳಿಗೆ ಪೂರಕವಾಗಿ ಆರ್ಥಿಕ ನೆರವನ್ನು ಒದಗಿಸಲಾಗುತ್ತದೆ. ಈ ಕಾರ್ಯಕ್ರಮವು ಮುಂದಿನ ಎರಡು ಅಂಶಗಳ ಮೂಲಕ ಅನುಷ್ಠಾನಗೊಳ್ಳಬೇಕಾಗಿರುತ್ತದೆ:

**ಪುನರ್ವಸತಿ:** ಬಡತನದ ಕಾರಣದಿಂದ ಸಂಸ್ಥೆಗಳಿಗೆ ಮಕ್ಕಳನ್ನು ದಾಖಲಿಸುವ ಕುಟುಂಬಗಳಿಗೆ ನೆರವು ನೀಡುವ ಮೂಲಕ ಮಕ್ಕಳು ಕುಟುಂಬದಲ್ಲಿ ಪೋಷಕರ ಆಶ್ರಯದಲ್ಲಿ ಬೆಳೆಯುವುದನ್ನು ಪ್ರೋತ್ಸಾಹಿಸುತ್ತದೆ.

**ತಡೆಗಟ್ಟುವುದು:** ಅತ್ಯಂತ ಕನಿಷ್ಟ ಸೌಲಭ್ಯಗಳಿಂದ ವಂಚಿತರಾದ ಅಥವಾ ಶೋಷಣೆಗೆ ಒಳಗಾದ ಕುಟುಂಬಗಳಿಗೆ ನೆರವು ನೀಡುವ ಮೂಲಕ ಮಗುವು ಪೋಷಕರಿಂದ ಬೇರ್ಪಡುವುದನ್ನು ತಪ್ಪಿಸಿ ಕುಟುಂಬದಲ್ಲಿ ಪೋಷಕರ ಜೊತೆ ಬೆಳೆಯುವುದನ್ನು ಪ್ರೋತ್ಸಾಹಿಸುತ್ತದೆ.

ಮುಂದುವರೆದು, ಉಲ್ಲೇಖಿತ ಆದೇಶದ ಅನುಬಂಧ ಕ್ರಮಾಂಕ 3 (ಅ)ರಲ್ಲಿ "ಸತತವಾಗಿ ಆರು ತಿಂಗಳವರೆಗೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಆಶ್ರಯ ಪಡೆದಿರುವ ಮಕ್ಕಳ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಇಂತಹ ಮಕ್ಕಳನ್ನು ಕುಟುಂಬಗಳಿಗೆ ಮರು ಸೇರ್ಪಡೆ ಮಾಡುವುದು" ಎಂಬ

ಅಂಶಕ್ಕೆ ಪ್ರಾಮುಖ್ಯತೆ ನೀಡಿ ಪರಿಶೀಲಿಸಬೇಕಾಗಿರುತ್ತದೆ. ಹಾಗೆಯೇ ಕ್ರಮಾಂಕ 5 (ii)ರಲ್ಲಿ **ರಕ್ಷಣಾಧಿಕಾರಿಗಳ ಪಾತ್ರ (ಸಾಂಸ್ಥಿಕ ಸೇವೆ)**: "ಪುನರ್ವಸತಿಗಾಗಿ ಸಂಸ್ಥೆಯಲ್ಲಿರುವ ಮಕ್ಕಳನ್ನು ಗುರುತಿಸುವುದು ಮತ್ತು ಶಿಫಾರಸ್ಸು ಮಾಡುವುದು ರಕ್ಷಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ" ಎಂಬ ಸ್ಪಷ್ಟ ನಿರ್ದೇಶನವಿರುತ್ತದೆ. ಆದ್ದರಿಂದ ಕಳೆದ 3 ವರ್ಷಗಳಲ್ಲಿ (ವರ್ಷಾವಾರು) ಎಷ್ಟು ಮಕ್ಕಳನ್ನು ಕುಟುಂಬದೊಡನೆ ಮರು ಸೇರ್ಪಡೆಗೊಳಿಸಲು ಕ್ರಮವಹಿಸಲಾಗಿದೆ ಎಂಬ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಒದಗಿಸುವುದು.

ಹಾಗೆಯೇ ಕ್ರಮಾಂಕ 5 (iii)ರಲ್ಲಿ ರಕ್ಷಣಾಧಿಕಾರಿಗಳು (ಅಸಾಂಸ್ಥಿಕ ಸೇವೆ)ರವರ ಪಾತ್ರದ ಜವಾಬ್ದಾರಿಗಳನ್ವಯ, ಸಂಸ್ಥೆಯಿಂದ ಕುಟುಂಬದೊಡನೆ ಮರು ಸೇರ್ಪಡೆಗೊಳಿಸದ ಪ್ರತೀ ಮಗುವಿನ ಅನುಸರಣೆ (Post followup) ಮಾಡಿ ಮಗು ಕುಟುಂಬದೊಡನೆ ಹೊಂದಿಕೊಂಡಿದೆಯೇ, ಮಗುವಿನ ವಿದ್ಯಾಭ್ಯಾಸದ ಪ್ರಗತಿ ಹಾಗೂ ಮನೆಯ ಆರ್ಥಿಕ/ಸಾಮಾಜಿಕ ಪರಿಸ್ಥಿತಿಯ ಮಾಹಿತಿಯನ್ನು ಪರಿಶೀಲಿಸಬೇಕಾಗಿರುತ್ತದೆ. ಇದಕ್ಕೆ ಪೂರಕವಾಗಿ ಇನ್ನು ಮುಂದೆ ಉಲ್ಲೇಖಿತ ಆದೇಶದ ಅನುಬಂಧದಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮವಹಿಸುವುದು.

ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಗೊಳಪಡುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ, ಕುಟುಂಬವಿದ್ದರೂ ಸಹ 6 ತಿಂಗಳಿಗಿಂತ ಹೆಚ್ಚಿನ ಅವಧಿಗೆ ಸಂಸ್ಥೆಯಲ್ಲಿಯೇ ಉಳಿದಿರುವ ಮಕ್ಕಳ ವಿವರಗಳನ್ನು ಪರಿಶೀಲಿಸಿ, ಕುಟುಂಬದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಗೃಹ ಅಧ್ಯಯನ ವರದಿಯನ್ನು ಮಕ್ಕಳ ಪಾಲನಾ ಸಂಸ್ಥೆಯಿಂದ ಪಡೆದು ಪರಿಶೀಲಿಸುವುದು. ಈ ಪ್ರಾಯೋಜಕತ್ವ ಕಾರ್ಯಕ್ರಮದ ಆರ್ಥಿಕ ಸಹಾಯವನ್ನು ಸದರಿ ಕುಟುಂಬಕ್ಕೆ ಒದಗಿಸಿ, ಅವಶ್ಯವಿದ್ದಲ್ಲಿ ಮಗುವಿನ ಕುಟುಂಬದವರೊಡನೆ ಸಮಾಲೋಚಿಸಿ, ಮಗುವನ್ನು ಕುಟುಂಬಕ್ಕೆ ಮರು ಸೇರ್ಪಡೆಗೊಳಿಸಲು ಅಗತ್ಯ ಕ್ರಮವಹಿಸಲು ಕಾರ್ಯೋನ್ಮುಖರಾಗಲು ತಿಳಿಸಿದೆ. ಜಿಲ್ಲೆಯಲ್ಲಿನ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಈ ರೀತಿಯ ಮಕ್ಕಳ ಮಾಹಿತಿಯನ್ನು ಸಂಸ್ಥೆವಾರು ಸಿದ್ಧಪಡಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,

13.07.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

D\Shobha\Letters Sup

# ಅನುಬಂಧ

## ಕಳೆದ ಮೂರು ವರ್ಷಗಳಲ್ಲಿ ಪ್ರಾಯೋಜಕತ್ವ ಕಾರ್ಯಕ್ರಮದಡಿಯಲ್ಲಿ ಪುನರ್ವಸತಿಗಾಗಿ (Rehabilitation) ಗುರುತಿಸಿದ ಫಲಾನುಭವಿಗಳ ವಿವರ

| ಜಿಲ್ಲೆಯ ಹೆಸರು | ಸಂಸ್ಥೆಯ ಹೆಸರು (ಸಂಸ್ಥೆವಾರು ಪ್ರತ್ಯೇಕವಾಗಿ ನಮೂದಿಸುವುದು) | ಸರ್ಕಾರಿ/ ಸರ್ಕಾರೇತರ | ಕುಟುಂಬದೊಡನೆ ಮರು ಸೇರ್ಪಡೆಗೊಳಿಸಲು ಪ್ರಾಯೋಜಕತ್ವ ಯೋಜನೆಯ ಅಡಿಯಲ್ಲಿ ಫಲಾನುಭವಿಗಳನ್ನಾಗಿ ಗುರುತಿಸಿದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳ ಸಂಖ್ಯೆ **(for De-Institutionalisation)** | | | | | | | | | ಫಲಾನುಭವಿಗಳ ವಯಸ್ಸು | | | | ಫಲಾನುಭವಿಗಳ ಶೈಕ್ಷಣೀಕ ವಿವರ | | | ಫಲಾನುಭವಿಗಳ ಪೋಷಕರ ಸ್ಥಿತಿ | | | | | ಷರಾ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | 2017-18 | | | 2018-19 | | | 2019-20 | | | 0 ರಿಂದ 06 | 6 ರಿಂದ 10 | 11 ರಿಂದ 14 | 15 ರಿಂದ 18 | 1 ರಿಂದ 4 ನೇ ತರಗತಿ | 5 ರಿಂದ 7 ನೇ ತರಗತಿ | 8 ರಿಂದ 10 ನೇ ತರಗತಿಯ ಮೇಲ್ಪಟ್ಟು | ಏಕ ಪೋಷಕರು | ವಿಧವೆಯರು | ಕುಷ್ಠ ರೋಗ ಬಾಧಿತರು | ಜೈಲು ವಾಸಿಗಳು | ಇತರ | |
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | | | | | | | | | | | | | |
| | | | | | | | | | | | | | | | | | | | | | | | | |

ಸಹಿ/-
ರಕ್ಷಣಾಧಿಕಾರಿ ಸಾಂಸ್ಥಿಕ,
..............................ಜಿಲ್ಲೆ.

ಸಹಿ/-
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
..............................ಜಿಲ್ಲೆ.